ಸಾಕ್ಷಿಯನ್ನು ದಿಃ **09.01.2020** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದಃ

ನನ್ನ ಖಾಯಂ ವಾಸ ಕೊಡಗಳ್ಳಿ. ಸುಮಾರು 20 ವರ್ಷದಿಂದ ಅಲ್ಲಿ ವಾಸವಿದ್ದೇವೆ. ನಾನು ಬಿ.ಎ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಸುಂದರೇಶ ನನ್ನ ಸ್ನೇಹಿತ. ನಾನು ಸುಂದರೇಶ ಒಂದೇ ಜನಾಂಗದವರು ಎಂದರೆ ಸರಿಯಲ್ಲ. ಸುಂದರೇಶ ನನಗೆ ಸುಮಾರು 15 ವರ್ಷಗಳಿಂದ ಪರಿಚಯ. ಸುಂದರೇಶರವರ ಕುಟುಂಬದ ಸದಸ್ಯರುಗಳು ನನಗೆ ಪರಿಚಯ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ವಾದ ಪತ್ರದ ಅಂಶಗಳು ನನಗೆ ಗೊತ್ತಿರುತ್ತವೆ. ಸುಂದರೇಶರವರ ಮಕ್ಕಳು ಎಲ್ಲಿ ವಾಸವಾಗಿದ್ದಾರೆಂದು ನನಗೆ ಗೊತ್ತಿಲ್ಲ. ಸುಂದರೇಶರವರ ಜೊತೆ ಹುಟ್ಟಿದವರ ಬಗ್ಗೆ ನನಗೆ ಗೊತ್ತಿಲ್ಲ. ಸುಂದರೇಶರವರು ಜೀವಂತವಾಗಿದ್ದಾಗ ಯಾವುದೇ ಕೆಲಸ ಮಾಡಿಲ್ಲ. ಸುಂದರೇಶರವರು ಜೀವಿತ ಕಾಲದಲ್ಲಿ ಹೆಚ್ ಪಿ ಸಿ ಲಿಮಿಟೆಡ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಆ ರೀತಿ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸುಂದರೇಶರವರನ್ನು ಕೆಲಸದಿಂದ ನಿವೃತ್ತಿ ಆದನಂತರ ಬಾಪೂಜಿ ಆಶ್ರಮಕ್ಕೆ 7 ವರ್ಷದ ಹಿಂದೆ ಸೇರಿಸಿರುತ್ತೇನೆ. ಆ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆಂದು ನುಡಿಯುತ್ತಾರೆ. ಸುಂದರೇಶರವರು ಮಾಡಿಸಿರುವ ಅನ್ನ್ಯೂಟಿ ಪಾಲಿಸಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಅನ್ನ್ಯೂಟಿ ಪಾಲಿಸಿ ಸ್ಕೀಂ ಎನ್ನುವುದು ಹೆಚ್ ಬಿ ಸಿ ಎಲ್ ಎಕ್ಸ್ ಎಂಪ್ಲಾಯಿಸ್ ಸೂಪರ್ ಅನ್ಯ್ಯೂಯೇಶನ್ ಟ್ರಸ್ಟ್ ಮತ್ತು ಎಲ್ ಐ ಸಿ ಆಫ್ ಇಂಡಿಯಾ ಇವರ ಮಧ್ಯೆ ಆದ ಒಂಡಂಬಡಿಕೆ ಪಾಲಿಸಿ ಎಂದರೆ ಸರಿ. ಸುಂದರೇಶನವರ ಹೆಂಡತಿ ಪೌತಿ ನಂತರ ನನ್ನನ್ನು ನಾಮಿನಿಯಾಗಿ ನೇಮಕ ಮಾಡಿದ್ದರು ಎಂದರೆ ಸರಿ. ಎಲ್ ಐ ಸಿ ಆಫ್ ಇಂಡಿಯಾಗೆ ಅಪ್ರೂವಲ್ ಕೊಟ್ಟರೆ ಟ್ರಸ್ಟವರು ತಿದ್ದುಪಡಿ ಮಾಡುತ್ತಾರೆಂದರೆ ಸರಿ. ಸುಂದರೇಶರವರು ಮರಣ ಶಾಸನವನ್ನು ಬರೆದಿರುವ ವಿಚಾರ ಅವರು ಸಾಯುವುದಕ್ಕೆ 2 ವರ್ಷಕ್ಕೆ ಮೊದಲು ಹೇಳಿದರು. ಸುಂದರೇಶನವರು ನಿಧನರಾದನಂತರ ಒಂದು ತಿಂಗಳ ಒಳಗಡೆ ಪ್ರತಿವಾದಿಗಳಿಗೆ ಬರವಣಿಗೆ ಮೂಲಕ ಸಂಪರ್ಕ ಮಾಡಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲವೆಂದರೆ ಸರಿ. ಸದರಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಜವಾಬು ನೋಟಿಸು ಬಂದಿರುವುದಿಲ್ಲ.

ಪ್ರತಿವಾದಿಗಳು ಘೋಷಣಾತ್ಮ ಡಿಕ್ರಿಯನ್ನು ಪಡೆದುಕೊಂಡು ಬರಲು ಹೇಳಿದರೆಂದು ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ, ಆದರೆ ಅದರ ಸಂಬಂಧ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲವೆಂದರೆ ಸರಿ. ಪ್ರತಿವಾದಿಗಳಿಗೆ ದಾವೆ ಪೂರ್ವದಲ್ಲಿ ಯಾವುದೆ ಕಾನೂನು ಬದ್ದ ನೋಟಿಸು ನೀಡಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ.1 ವಿಲ್ ನ್ನು ದಾಖಲೆಯಾಗಿ ರವಿಕುಮಾರ್ ರವರು

ಸಹಿ ಮಾಡಿದ್ದು, ರಾಜು ಎಂಬುವರು ಸಹಿ ಮಾಡಿರುತ್ತಾರೆ. ಸದರಿ ರವಿಕುಮಾರ್ ರವರು ನನಗೂ ಮತ್ತು ಸುಂದರೇಶರವರಿಗೆ ಸ್ನೇಹಿತ. ಸದರಿ ದಾಖಲೆಯನ್ನು ಸಂಜಯ್ ದತ್ ಗುಪ್ತ ಎಂಬುವರು ತಯಾರು ಮಾಡಿರುತ್ತಾರೆ. ಸುಂದರೇಶರವರ ಆರೋಗ್ಯ ಸ್ಥಿತಿ ಸರಿಯಿಲ್ಲದ ಕಾರಣ ಅವರನ್ನು ಬಾಪೂಜಿ ಆಶ್ರಮಕ್ಕೆ ಸೇರಿಸಿರುತ್ತೇವೆ. ಸದರಿ ನಿಪಿ.1 ದಾಖಲೆಯನ್ನು ತಯಾರು ಮಾಡುವ ಕಾಲದಲ್ಲಿ ಸುಂದರೇಶರವರ ಮಾನಸಿಕ ಸ್ಥಿತಿ ಮತ್ತು ದೈಹಿಕ ಸ್ಥಿತಿ ಸರಿಯಿಲ್ಲ ಎಂದರ ಸಾಕ್ಷಿ ಮಾನಸಿಕವಾಗಿ ಚೆನ್ನಾಗಿರಿದ್ದು ದೈಹಿಕವಾಗಿ ಸರಿಯಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಸುಂದರೇಶರವರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡು ನಾನು ಮತ್ತು ಸಾಕ್ಷಿದಾರರಗಳು ಮತ್ತು ಬಿಕ್ಲಂದಾರರು ಎಲ್ಲರೂ ಸೇರಿ ನಿಪಿ.1 ದಾಖಲೆ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ.. ಪಾಲಿಸಿಗೆ ಸಂಬಂಧಪಟ್ಟಂತೆ ಬದಲಾವಣೆ ಬಗ್ಗೆ ಯಾವುದೇ ಅನುಮತಿ ಎಲ್ ಐ ಸಿ ಆಫ್ ಇಂಡಿಯಾರವರಿಗೆ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಅಕ್ರಮ ಲಾಭ ಬರಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ